ಅಧ್ಯಕ್ಷರು.—ಈ ಸಾರಿ ಏನಾದರೂ ಪ್ರಯತ್ನ ಮಾಡಿ ಮಾಡಿಸೋಣ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ.

ಡಣಾಯಕನ ಕೆರೆಯ ನೀರಾವರಿ ಯೋಜನೆಯ ಮಂಜೂರಾತಿ

271 (329) ಶ್ರೀ ಕೆ ಚೆನ್ನಬಸವನಗೌಡ (ಕೊಡಿಗ್ಲಿ).-- ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:--

ಅ) ಡಣಾಯಕನಪುರದ ಹತ್ತಿರ ನಿಂತಿರುವ ತುಂಗಭದ್ರಾ ಜಲಾಶಯದ ನೀರನ್ನು ಡಣಾಯಕನ ಕೆರೆಗೆ ಲಿಫ್ಟ್ ಮಾಡುವುದರಿಂದ ಅಲ್ಲಿ ಅಚ್ಚು ಕಟ್ಟು ದಾರರಿಗೆ ಹೆಚ್ಚಿನ ಪ್ರಯೋಜನವಾಗುವುದೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ ಸದರಿ ಯೋಜನೆಯನ್ನು ಸರ್ಕಾರದವರು ಜರೂರಾಗಿ ಕಾರ್ಯಗತ ಮಾಡುವರೇ ;

ಇ) ಮೇಲಿನ ಯೋಜನೆಯನ್ನು ಕೈಗೊಳ್ಳುವುದರಿಂದ ಕೆರೆಯು ತುಂಬಿ ಯಾವಗಲೂ 1,200 ರಿಂದ 2,000 ಎಕರೆ ಅಚ್ಚು ಕಟ್ಟುದಾರರಿಗೆ ಹೆಚ್ಚು ಪ್ರಯೋಜನವಾಗುವುದೆಂಬ ವಿಷಯ ಸರ್ಕಾರದವರ ಗಮನಕ್ಕೆ ಬಂದಿಲ್ಲವೇ ?

ಶ್ರೀ ಆರ್. ಎನ್. ಲಕ್ಷ್ಮೀಪತಿ (ಸಣ್ಣ ನೀರಾವರಿ ರಾಜ್ಯ ಸಚಿವರು).-- ಅ) ಹೌದು.

ಆ) ಪರಿಶೀಲನೆಯಲ್ಲಿದೆ.

ಇ) ಪರಿಶೀಲನೆಯಲ್ಲಿದೆ.

ಶ್ರೀ ಕೆ. ಚೆನ್ನಬಸವನಗೌಡ.-- ಮಾನ್ಯ ಅಧ್ಯಕ್ಷರೆ, ಸುಮಾರು 10 ವರ್ಷಗಳಿಂದಲೂ ಈ ಕೆಲಸ ಆಗದೇ ಹಾಗೇ ಪೆಂಡಿಂಗನಲ್ಲಿದೆ ಪ್ರತಿ ಸಾರಿಯೂ ಇದು ಪರಿಶೀಲನೆಯಲ್ಲಿದೆ ಎಂದು ಹೇಳಿಕೊಂಡು ಬಂದಿದ್ದಾರೆ. ಪರಿಶೀಲನೆಯಲ್ಲಿದೆ ಎಂದು ಹೇಳಿದರೆ ಅದನ್ನು ಯಾವಾಗ ಕಾರ್ಯಗತ ಮಾಡುತ್ತೀರಿ ಎಂಬುದನ್ನು ಸ್ಪಷ್ಟವಾಗಿ ಹೇಳಬೇಕು

ಶ್ರೀ ಆರ್. ಎನ್. ಲಕ್ಷ್ಮೀಪತಿ.---ಮೂರನೇ ಹಂತದ ವ್ಯಾಸನ ಕೆರೆ ಯೋಜನೆಯಿಂದ ಡಣಾಯಕನ ಕೆರೆಗೆ ನೀರು ತುಂಬಬೇಕು ಎಂಬ ಯೋಜನೆ ಇತ್ತು. ಆದರೆ ಗ್ರಾಮಸ್ಥರು ಸ್ವತಂತ್ರವಾಗಿ ನಮಗೆ ಏತ ನೀರಾವರಿ ಮಾಡಿ ನಂತರ ಕೆರೆ ತುಂಬುವುದಕ್ಕೆ ಏರ್ಪಾಡು ಮಾಡಿ ಎಂದು ಅರ್ಜಿ ಕೊಟ್ಟಿದ್ದಾರೆ ಈ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ. ಈ ಕೆಲಸಕ್ಕೆ 23 ಲಕ್ಷ ರೂಪಾಯಿ ಆಗುತ್ತದೆ ಹೀಗೆ ಮಾಡಿದರೆ ಎರಡು ಬೆಳೆ ತೆಗೆಯುವುದಕ್ಕೆ ಅವಕಾಶವಿದೆ. ಇದನ್ನು ಅಪ್ರೈಸಲ್ ಕಮಿಟಿಯವರು ಒಪ್ಪಬೇಕಾಗುತ್ತದೆ. 10 ಲಕ್ಷ ರೂಪಾಯಿಗಳಿಗಿಂತ ಹೆಚ್ಚು ಖರ್ಚಾಗುವ ಕೆಲಸಗಳಾದರೆ ಆ ಕಮಿಟಿ ಮುಂದೆ ಹೋಗಬೇಕು. ಅವರು ಒಪ್ಪಿಗೆ ಕೊಟ್ಟರೆ ಈ ಕೆಲಸವನ್ನು ಕಾರ್ಯಗತ ಮಾಡುತ್ತೇವೆ.

ಶ್ರೀ ಕೆ ಚೆನ್ನಬಸವನಗೌಡ.-- ಮೂರನೇ ಹಂತದ ವ್ಯಾಸನ ಕೆರೆ ಯೋಜನೆ ಬಿಟ್ಟು ಇದು ಸಮೀಪವಾಗುವುದರಿಂದ ಇಲ್ಲಿಂದಲೇ ಮಾಡಬೇಕು ಎಂದು ಮಾಡಿರುವುದು ಯೋಗ್ಯವಾದುದು. ವ್ಯಾಸನಕೆರೆ ಎರಡನೇ ಹಂತದ ಕೆಲಸ ಇನ್ನೂ ಕಾರ್ಯಗತವಾಗಿಲ್ಲ. ಆ ಕೆಲಸ ಇನ್ನೂ ಪೂರ್ತಿಯಾಗಬೇಕಾಗಿದೆ. ಕಾಲುವೆಯನ್ನು ಎತ್ತರ ಮಾಡಿದರೆ ನೀರಾವರಿಗೆ ಬಹಳ ಅನುಕೂಲವಾಗುತ್ತದೆ. ಎರಡನೇ ಹಂತದ ವ್ಯಾಸನಕೆರೆ ಕೆಲಸವನ್ನು ಬೇಗ ಮಾಡಿ ಕಾಲುವೆ ಎತ್ತರ ಮಾಡುವ ಕೆಲಸವನ್ನು ಮಾಡುತ್ತೀರಾ ?

ಶ್ರೀ ಆರ್. ಎನ್. ಲಕ್ಷ್ಮೀಪತಿ.-- ಎರಡನೇ ಹಂತದ ಕಾರ್ಯ ಸಂಪೂರ್ಣವಾಗಿ ಆಗಿದೆ. ಈ ತಿಂಗಳ ಕೊನೆಯಲ್ಲಿ ನೀರು ಕೊಡುವುದಕ್ಕೆ ಸಾಧ್ಯವಾಗುತ್ತದೆ. ಕಾಲುವೆ ವಿಚಾರದಲ್ಲಿ ಅನಾನೂಕೂಲತೆ ಇದ್ದರೆ ಸರಿಪಡಿಸುತ್ತೇವೆ.

ಪ್ರಶ್ನೆ ಸಂಖ್ಯೆ : 275 (432)

ಸದಸ್ಯರು ಹಾಜರಿರಲಿಲ್ಲ.

ಕೊಡಗು ಜಿಲ್ಲೆಯಲ್ಲಿರುವ ಏಲಕ್ಕಿತೋಟ ವಿಸ್ತೀರ್ಣ

273 (522) ಶ್ರೀ ಎಂ. ಎಂ. ನಾಣಯ್ಯ (ಮಡಿಕೇರಿ).-- ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:--

ಅ) ಕೊಡಗು ಜಿಲ್ಲೆಯಲ್ಲಿರುವ ಒಟ್ಟು ಸರ್ಕಾರಿ ಗೇಣಿ ಏಲಕ್ಕಿ ಮಲ್ಲೆಗಳ ಸಂಖ್ಯೆ ಎಷ್ಟು ? ಹಾಗೂ ಅವುಗಳ ವಿಸ್ತೀರ್ಣವೆಷ್ಟು ;